ಕುಶಾಲನಗರ ಯೋಜನಾ ಪ್ರಾಧಿಕಾರ, ಕುಶಾಲನಗರ

ಕಾವೇರಿ ಬಡಾವಣೆ, ಸಂ.05, ಬ್ಲಾಕ್ ನಂ.01, ಕುಶಾಲನಗರ – 571 234

Email Id: kushalnagaradtp@hotmail.com **ದೂರವಾಣಿ ಸಂ: 08276–274040**

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಪ್ರಮೋದ್ ಮುತ್ತಪ್ಪ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 15–02–2025 ರ ಶನಿವಾರದಂದು ಪೂರ್ವಹ್ನ 11.00 ಗಂಟೆಗೆ ನಡೆದ ಪ್ರಾಧಿಕಾರದ 64 ನೇ ಸಾಮಾನ್ಯ ಸಭೆಯ ನಡಾವಳಿ

ಸಭೆಯಲ್ಲಿ ಹಾಜರಿದ್ದವರು :–

1. ಅಧ್ಯಕ್ಷರು
2. ಸದಸ್ಯಕಾರ್ಯದರ್ಶಿ, ಕುಶಾಲನಗರ ಯೋಜನಾ ಪ್ರಾಧಿಕಾರ
3. ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ.
4. ಶ್ರೀಮತಿ ಸಂಗೀತ ಕೆ.ಆರ್, ಸದಸ್ಯರು, ಕುಶಾಲನಗರ ಯೋಜನಾ ಪ್ರಾಧಿಕಾರ
5. ಶ್ರೀ ವಿ.ಎಸ್. ಸಜಿ, ಸದಸ್ಯರು, ಕುಶಾಲನಗರ ಯೋಜನಾ ಪ್ರಾಧಿಕಾರ
6. ಶ್ರೀ ಕಿರಣ್‌ಕುಮಾರ್ ಸದಸ್ಯರು, ಕುಶಾಲನಗರ ಯೋಜನಾ ಪ್ರಾಧಿಕಾರ
7. ಶ್ರೀ ಆನಂದ್ ಕುಮಾರ್, ಸ್ಥಳೀಯ ಸಂಸ್ಥೆಯಿಂದ ನಾಮನಿರ್ದೇಶಿತವಾದ ಸದಸ್ಯರು.
8. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗುಡ್ಡೆಹೊಸೂರು ಗ್ರಾಮಪಂಚಾಯಿತಿ
9. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ

ವಿಷಯ ಸಂಖ್ಯೆ(01): ದಿನಾಂಕ:17–12–2024 ರಂದು ನಡೆದ ಪ್ರಾಧಿಕಾರದ 63ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಸ್ಥಿರೀಕರಿಸುವ ಬಗ್ಗೆ.

ಟಿಪ್ಪಣಿ: ದಿನಾಂಕ: 17–12–2024 ರಂದು ನಡೆದ ಪ್ರಾಧಿಕಾರದ 63ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಓಪ್ಪಿ ಸ್ಥಿರೀಕರಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

(i): ಸಿ.ಎ. ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ

ಹಿಂದಿನ ಸಭೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ ಇವರಿಗೆ ಮೌಲಾನಾ ಆಜಾದ್ ಮಾದರಿ ಶಾಲೆಯ ಸ್ವಂತ ಕಟ್ಟಡವನ್ನು ನಿರ್ಮಿಸಲು ಮುಳ್ಳುಸೋಗೆ ಗ್ರಾಮದ ಸರ್ವೆ ನಂ. 43/1, 43/2 ರಲ್ಲಿನ 1113.05 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು ಹಂಚಿಕೆ ಮಾಡಬಹುದೆಂದು ಮತ್ತು ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ, ಸೋಮವಾರಪೇಟೆ ಇವರಿಗೆ ಅಂಗನವಾಡಿ ಕೇಂದ್ರ ನಡೆಸಲು ಬೈಚನಹಳ್ಳಿ ಗ್ರಾಮದ ಸರ್ವೆ ನಂಬರ್ 89/4, 89/5, 89/10 ರಲ್ಲಿನ 226.61 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು ಹಂಚಿಕೆ ಮಾಡಬಹುದೆಂದು ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಅದರಂತೆ ಸದರಿ ಎರಡು ಇಲಾಖೆಗಳಿಗೆ ಪತ್ರ ಬರೆದು Form-I ಅನ್ನು ಭರ್ತಿ ಮಾಡಿ ಅದರೊಂದಿಗೆ ಗುತ್ತಿಗೆ ಮೊಬಲಗನ್ನು ಈ ಪತ್ರ ತಲುಪಿದ ತೊಂಭತ್ತು ದಿನಗಳ ಒಳಗಾಗಿ ಈ ಕಛೇರಿಗೆ ಪಾವತಿಸುವಂತೆ ತಿಳಿಸಲಾಗಿದೆ.

ಮುಂದುವರೆದು, ಜಿಲ್ಲಾ ಅಧಿಕಾರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ ಇವರು ಈ ಹಿಂದೆ ಪಟ್ಟಣಪಂಚಾಯಿತಿ, ಕುಶಾಲನಗರ ವತಿಯಿಂದ 1ನೇ ಬ್ಲಾಕ್, ಸ.ನಂ.03 ರ ಆರ್.ಸಿ. ಬಡಾವಣೆಯಲ್ಲಿರುವ ಸಿ.ಎ. ನಿವೇಶನವನ್ನು ಮೌಲಾನಾ ಆಜಾದ್ ಮಾದರಿ ಶಾಲೆ ನಿರ್ಮಿಸಲು ಹಂಚಿಕೆ ಮಾಡಲು ನಿವೇಶನಕ್ಕೆ ಪಾವತಿಸಬೇಕಾದ ಮೊತ್ತದ ಬೇಡಿಕೆ ಪತ್ರವನ್ನು ಕೊಟ್ಟಿರುತ್ತಾರೆ. ಸದರಿ ಸಿ.ಎ. ನಿವೇಶನವನ್ನು ಖರೀದಿಸಲು 55 ಲಕ್ಷ

ಬಿಡುಗಡೆಗೊಂಡಿದ್ದು, ಸದರಿ ನಿವೇಶನವು ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಅತ್ಯಂತ ಸೂಕ್ತವಾಗಿರುವುದರಿಂದ ಆರ್.ಸಿ. ಬಡಾವಣೆಯಲ್ಲಿರುವ ಸಿ.ಎ. ನಿವೇಶನವನ್ನು ಒದಗಿಸಿಕೊಡಬೇಕೆಂದು ಹಾಗೂ ಸದರಿ ನಿವೇಶನ ಖರೀದಿಗೆ ಡಿ.ಡಿ ಯನ್ನು ಪಾವತಿಸಲು ವಿವರಗಳನ್ನು ಸಲ್ಲಿಸಬೇಕೆಂದು ಕೋರಿರುತ್ತಾರೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಪರಿಶೀಲಿಸಲಾಗಿ, ಬೈಚನಹಳ್ಳಿ ಗ್ರಾಮದ ಸ.ನಂ. 03 ರಲ್ಲಿನ 9.77 ಎಕರೆ ವಿಸ್ತೀರ್ಣದ ವಸತಿ ವಿನ್ಯಾಸ ನಕ್ಷೆಗೆ 07–06–2013 ರಂದು ಈ ಕಛೇರಿಯಿಂದ ಅನುಮೋದನೆ ನೀಡಲಾಗಿದೆ. ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ, ಕುಶಾಲನಗರ ಇವರು ಪತ್ರ ಸಂ:ಪಪಂಕು/ಸಿ1/50/2020–21 ದಿನಾಂಕ:19–09–2020 ರಲ್ಲಿ **"ಸದರಿ ಬಡಾವಣೆಯಲ್ಲಿ ರಸ್ತೆ, ಪಾರ್ಕ್ ಮತ್ತು ಸಾರ್ವಜನಿಕ ಉದ್ದೇಶಕ್ಕೆ ಮೀಸಲಿರಿಸಿದ ನಿವೇಶನಗಳನ್ನು ಪಟ್ಟಣ ಪಂಚಾಯಿತಿಗೆ ದಾನಪತ್ರದ ನೋಂದಣಿ ಮಾಡಿಕೊಟ್ಟಿರುತ್ತಾರೆ"** ಎಂದು ತಿಳಿಸಿರುತ್ತಾರೆ. ಸರ್ಕಾರದ ಸುತ್ತೋಲೆ ಸಂಖ್ಯೆ:ನಂ/ಯುಡಿಡಿ/27/ಟಿಟಿಪಿ/ 2016 ಬೆಂಗಳೂರು ದಿನಾಂಕ: 24–05–2017 ಮತ್ತು ನಅಇ 01 ಟಿಎಂಡಿ 2018 ದಿನಾಂಕ:30–01–2018 ರ ಸುತ್ತೋಲೆಗಳನ್ವಯ ಕುಶಾಲನಗರ ಯೋಜನಾ ಪ್ರಾಧಿಕಾರವು ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡಬೇಕಾಗಿರುವುದರಿಂದ, ಈಗಾಗಲೇ ಪುರಸಭೆ ಹೆಸರಿನಲ್ಲಿರುವ ಸದರಿ ಬೈಚನಹಳ್ಳಿ ಗ್ರಾಮದ ಸ.ನಂ. 03 ರಲ್ಲಿನ 2621.66 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು ಕುಶಾಲನಗರ ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸಿದ್ದಲ್ಲಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಹಂಚಿಕೆ ಮಾಡಲು ಕ್ರಮವಹಿಸಬಹುದಾಗಿರುತ್ತದೆ. ವಿಷಯವನ್ನು ಸಭೆಗೆ ಮಂಡಿಸಿದೆ.

ಚರ್ಚೆ:– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರು ಮಾತನಾಡಿ, ನಾಗರೀಕ ಸೌಲಭ್ಯ ನಿವೇಶನಗಳು ಯೋಜನಾ ಪ್ರಾಧಿಕಾರದ ಮಾಲೀಕತ್ವದಲ್ಲಿ ಇದ್ದಲ್ಲಿ, ನಿವೇಶನದ ಆಸ್ತಿ ತೆರಿಗೆಯನ್ನು ಪ್ರಾಧಿಕಾರದ ವತಿಯಿಂದ ಪಾವತಿಸಬೇಕೆಂದು ತಿಳಿಸಿದರು ಹಾಗೂ ಇದಕ್ಕೆ ಸಂಬಂಧಪಟ್ಟ ಸರ್ಕಾರದ ಸುತ್ತೋಲೆಯನ್ನು ನೀಡುವುದಾಗಿ ತಿಳಿಸಿದರು. ಮುಖ್ಯಾಧಿಕಾರಿಗಳು ನಾಗರೀಕ ಸೌಲಭ್ಯ ನಿವೇಶನದಲ್ಲಿ ಸಾರ್ವಜನಿಕ ಗ್ರಂಥಾಲಯವನ್ನು ಅಭಿವೃದ್ಧಿಪಡಿಸುವ ಬಗ್ಗೆ ಮಾತನಾಡಿದರು. ಇದರ ಬಗ್ಗೆ ಚರ್ಚೆ ನಡೆದು ಸಿ.ಎ. ನಿವೇಶನ ಖಾತೆ (Fund V) ಯಲ್ಲಿರುವ ಮೊಬಲಗನ್ನು ಗ್ರಂಥಾಲಯ ನಿರ್ಮಿಸಲು ಉಪಯೋಗಿಸಿಕೊಳ್ಳಬಹುದೆಂದು ಸಭೆಯು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿತು. ಸದಸ್ಯಕಾರ್ಯದರ್ಶಿಗಳು ಮಾತನಾಡಿ ಪ್ರಾಧಿಕಾರದಿಂದ ಕೇವಲ ಒಂದು ಸಿ.ಎ ನಿವೇಶನ ಹಂಚಿಕೆ ಮಾಡಲಾಗಿದ್ದು, ಮೊಬಲಗು ಕಡಿಮೆ ಇರುವುದರಿಂದ ಗ್ರಂಥಾಲಯ ನಿರ್ಮಿಸಲು ಸಾಧ್ಯವಿರುವುದಿಲ್ಲ, ಮುಂದೆ ಸಿ.ಎ. ನಿವೇಶನ ಹಂಚಿಕೆ ಮಾಡಿ ಹೆಚ್ಚು ಮೊಬಲಗು ಸಂಗ್ರಹಣೆಗೊಂಡ ನಂತರ ಇದರ ಬಗ್ಗೆ ಕ್ರಮವಹಿಸಬಹುದಾಗಿರುತ್ತದೆ ಎಂದು ತಿಳಿಸಿದರು.

ನಿರ್ಣಯ:– ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಡಿಕೇರಿ ಇವರು ಕೋರಿರುವ ಸಿ.ಎ. ನಿವೇಶನವನ್ನು ಮುಖ್ಯಾಧಿಕಾರಿಗಳು ಪರಿತ್ಯಾಜನಾ ಪತ್ರದ ಮುಖಾಂತರ ಪ್ರಾಧಿಕಾರಕ್ಕೆ ಹಸ್ತಾಂತರಿಸಿ, ಖಾತೆ ನೊಂದಾಯಿಸಿದ ನಂತರ ನಿವೇಶನ ಹಂಚಿಕೆ ಮಾಡಲು ಕ್ರಮವಹಿಸಬೇಕೆಂದು ಸಭೆಯು ಸದಸ್ಯಕಾರ್ಯದರ್ಶಿಗಳಿಗೆ ಸೂಚಿಸಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ:(02): ಪ್ರಾಧಿಕಾರದ ಖಾತೆಗೆ ಡಿಸೆಂಬರ್ 2024 ಮತ್ತು ಜನವರಿ 2025ರ ಮಾಹೆಗಳ ಜಮಾ ಮತ್ತು ಖರ್ಚುಗಳ ವಿವರಗಳನ್ನು ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

ಟಿಪ್ಪಣಿ: ಡಿಸೆಂಬರ್ 2024 ಮತ್ತು ಜನವರಿ 2025ರ ಮಾಹೆಗಳ ಜಮಾ ಮತ್ತು ಖರ್ಚುಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

ಡಿಸೆಂಬರ್ –2024					
ಕ್ರ.ಸಂ	ಜಮಾ	ಮೊಬಲಗು	ಕ್ರ.ಸಂ	ವೆಚ್ಚ	ಮೊಬಲಗು
1.	ಪ್ರಾರಂಭಿಕ ಶಿಲ್ಕು	ರೂ.66,89,548=50	1.	ಹೊರಗುತ್ತಿಗೆ ಸೇವೆ	ರೂ. 38,654=00
2.	ಆಗಸ್ಟ್ 2024 ರ ಮಾಹೆಯ ಜಮಾ		2.	ಸದಸ್ಯಕಾರ್ಯದರ್ಶಿ ವೇತನ	ರೂ. 1,01,965=00
			3.	ವಿದ್ಯುತ್	ರೂ. 1,135=00
	1) ಪರಿಶೀಲನಾ ಶುಲ್ಕ	ರೂ. 17,510=00	4.	ದೂರವಾಣಿ	ರೂ. 1,769=00
	2) ಕೆ.ಟಿ.ಸಿ.ಪಿ.ಕಾಯ್ದೆ 18ರಅಡಿಯಲ್ಲಿ ಪಾವತಿಸುವ ಶುಲ್ಕ	ರೂ. 13,160=00		ಖಾಸಗಿ ವಾಹನದ ಹೊರಗುತ್ತಿಗೆ ಸೇವೆ	ರೂ. 27,600=00
				ವೆಚ್ಚ	ರೂ. 1,71,123=00
	3) ಕಟ್ಟಡ ಶುಲ್ಕ	ರೂ. 8,490=00		ಅಖೈರು ಶಿಲ್ಕು	ರೂ. 66,16,683=50
	4)ವಿನ್ಯಾಸ ರಚನೆ ಶುಲ್ಕ	ರೂ. 1,230=00			
	5) ಇಂಜಿನಿಯರ್‌ನೊಂದಣಿ	ರೂ. 2,000=00			
	5) ಬ್ಯಾಂಕ್ ಬಡ್ಡಿ	ರೂ. 45,368=00			
	6) ಇತರೆ	ರೂ. 10,500=00			
	ಒಟ್ಟು ಮೊಬಲಗು	ರೂ.67,87,806=50		ಒಟ್ಟು ಮೊಬಲಗು	ರೂ. 67,87,806=50

ಜನವರಿ 2025					
ಕ್ರ.ಸಂ	ಜಮಾ	ಮೊಬಲಗು	ಕ್ರ.ಸಂ	ವೆಚ್ಚ	ಮೊಬಲಗು
1.	ಪ್ರಾರಂಭಿಕ ಶಿಲ್ಕು	ರೂ. 66,16,683=50	1.	ಹೊರಗುತ್ತಿಗೆ ಸೇವೆ	ರೂ. 38,654=00
2.	ಆಗಸ್ಟ್ 2024 ರ ಮಾಹೆಯ ಜಮಾ		2.	ಸದಸ್ಯಕಾರ್ಯದರ್ಶಿ ವೇತನ	ರೂ. 1,01,965=00
				ವಿದ್ಯುತ್	ರೂ. 1,200=00
	1) ಪರಿಶೀಲನಾ ಶುಲ್ಕ	ರೂ. 59,020=00		ದೂರವಾಣಿ	ರೂ. 1,769=00
	2) ಕೆ.ಟಿ.ಸಿ.ಪಿ.ಕಾಯ್ದೆ 18ರಅಡಿಯಲ್ಲಿ ಪಾವತಿಸುವ ಶುಲ್ಕ	ರೂ. 1,03,780=00		ಸದಸ್ಯರ ಗೌರವಧನ	ರೂ. 6,000=00
				ಅಧ್ಯಕ್ಷರ ಗೌರವಧನ	ರೂ. 9,000=00
	3) ಕಟ್ಟಡ ಶುಲ್ಕ	ರೂ. 8,920=00		ಅಂಚೆ ಚೀಟಿ	ರೂ. 2,000=00
	4)ವಿನ್ಯಾಸ ರಚನೆ ಶುಲ್ಕ	ರೂ. 3,320=00		ವಕೀಲರ ಬಿಲ್ಲು	ರೂ. 2,000=00
	5) ಇತರೆ	ರೂ. 500=00		ಸಾದಿಲ್ವಾರು ವೆಚ್ಚ	ರೂ. 6,044=00
	6) ನಿಗಧಿತ ಠೇವಣಿ ವರ್ಗಾವಣೆ	ರೂ. 66,16,683=50		ಎರಡು ಹೊಸ ಸಿ.ಸಿ. ಕ್ಯಾಮೆರ ಅಳವಡಿಕೆ	ರೂ. 15,281=00
				ಜಿ.ಎಸ್.ಟಿ ರಿಜಿಸ್ಟ್ರೇಷನ್ ಮತ್ತು ಟಿ.ಡಿ.ಸ್ ಮಾಡಿಸಿದ ವೆಚ್ಚ	ರೂ. 5,900=00
				ಗಣರಾಜ್ಯೋತ್ಸವ ವಂತಿಕೆ ಹಣ	ರೂ. 5,000=00
				ಸಿ.ಎ. ನಿವೇಶನ ಟೋಟಲ್ ಸ್ಟೇಷನ್ ಸರ್ವೆ ವೆಚ್ಚ	ರೂ. 19,000=00
				ಪತ್ರಿಕಾ ಪ್ರಕಟಣೆ ವೆಚ್ಚ (ಸಿ.ಎ. ನಿವೇಶನ ಮತ್ತು ಭೂಉಪಯೋಗ ಬದಲಾವಣೆ)	ರೂ. 79,995=00
				ಬ್ಯಾಂಕ್ ಚಾರ್ಜಸ್	ರೂ. 177=00
				ಖಾಸಗಿ ವಾಹನದ ಹೊರಗುತ್ತಿಗೆ ಸೇವೆ	ರೂ. 40,020=00
				ಕಛೇರಿ ಕಟ್ಟಡ ಬಾಡಿಗೆ (ಜೂನ್ 2024 ರಿಂದ ಡಿಸೆಂಬರ್ 2024 ರವರೆಗೆ)	ರೂ. 80,500=00
				ಹೊರಗುತ್ತಿಗೆ ನೌಕರರ ಜಿ.ಎಸ್.ಟಿ. ಕಟಾವಣೆ (ಅಕ್ಟೋಬರ್ 2024 ರಿಂದ್ ಡಿಸೆಂಬರ್ 2024ರ ವರೆಗೆ)	ರೂ. 1,998=00
				ಸದಸ್ಯಕಾರ್ಯದರ್ಶಿ ವೇತನ (ಜನವರಿ 2025)	ರೂ. 96,254=00
				ವೆಚ್ಚ	ರೂ. 5,12,757=00

				ಅಖೈರು ಶಿಲ್ಕು	ರೂ. 79,75,,378=00
	ಒಟ್ಟು ಮೊಬಲಗು	ರೂ. 18,71,452=00		ಒಟ್ಟು ಮೊಬಲಗು	ರೂ. 18,71,452=00

ನಿರ್ಣಯ:– ಡಿಸೆಂಬರ್ 2024 ಮತ್ತು ಜನವರಿ 2025ರ ಮಾಹೆಗಳ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯಸಂಖ್ಯೆ:(03): ಕುಶಾಲನಗರ ಯೋಜನಾ ಪ್ರಾಧಿಕಾರದ 2025–26ನೇ ಸಾಲಿನ ಆಯವ್ಯಯ ಅಂದಾಜಿಗೆ ಅನುಮೋದನೆ ನೀಡುವ ಕುರಿತು.

ಟಿಪ್ಪಣಿ: ಕುಶಾಲನಗರ ಯೋಜನಾ ಪ್ರಾಧಿಕಾರದ 2025–26 ನೇ ಸಾಲಿನ ಆಯವ್ಯಯ ಅಂದಾಜನ್ನು ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮ 1965ರ ನಿಯಮ (22) ರಲ್ಲಿ ಸೂಚಿಸಿರುವ ನಮೂನೆ–4 ರಂತೆ ಪ್ರಪತ್ರ (I), (II) (III) ರನ್ವಯ ತಯಾರಿಸಿದ್ದು, ಪ್ರಾಧಿಕಾರದ ಸಭೆಯ ಅನುಮೋದನೆಗಾಗಿ ಆಯವ್ಯಯವನ್ನು ಮಂಡಿಸಿದೆ.

ನಿರ್ಣಯ: ಕುಶಾಲನಗರ ಯೋಜನಾ ಪ್ರಾಧಿಕಾರದ 2025–26 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಪ್ರಾಧಿಕಾರದ ಸಭೆಯು ಪರಿಶೀಲಿಸಿ ಚರ್ಚಿಸಿತು ಹಾಗೂ ಆಯವ್ಯಯ ಅಂದಾಜುಗಳನ್ನು ಸಭೆಯು ಅಂಗೀಕರಿಸಿತು ಹಾಗೂ ಸರ್ಕಾರದ ಆದೇಶ ಸಂಖ್ಯೆ: ನಇ 8 ಟಿಟಿಪಿ 2024 (ಇ), ಬೆಂಗಳೂರು ದಿನಾಂಕ: 08–07–2024 ರಂತೆ ಮಾನ್ಯ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರ ಅನುಮೋದನೆಗಾಗಿ ಸಲ್ಲಿಸಲು ತೀರ್ಮಾನಿಸಲಾಯಿತು.

ವಿಷಯಸಂಖ್ಯೆ(04): ಆರ್ಥಿಕ ಇಲಾಖೆಯು ಹೊರಡಿಸಿರುವ ಸುತ್ತೋಲೆ ದಿನಾಂಕ:02–07–2022 ರಲ್ಲಿ 'ಮಂಡಳಿಗಳು, ನಿಗಮಗಳು, ಸ್ಥಳೀಯ ಸಂಸ್ಥೆಗಳು, ಪ್ರಾಧಿಕಾರಗಳು, ಸ್ವಾಯತ್ತ ಸಂಸ್ಥೆಗಳು ಹೆಚ್ಚುವರಿ ನಿಧಿಗಳ ಹೂಡಿಕೆ ಬಗ್ಗೆ ಮಾರ್ಗಸೂಚಿ ನೀಡಿದ್ದು, ಅದರನ್ವಯ ಕ್ರಮವಹಿಸುವ ಕುರಿತು.

ಟಿಪ್ಪಣಿ: ಕುಶಾಲನಗರ ಯೋಜನಾ ಪ್ರಾಧಿಕಾರವು ಒಟ್ಟು ನಾಲ್ಕು ಖಾತೆಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕುಶಾಲನಗರ ಶಾಖೆಯಲ್ಲಿ ಹೊಂದಿದ್ದು, ಸದರಿ ನಾಲ್ಕು ಖಾತೆಗಳಲ್ಲಿ ದಿನಾಂಕ: 31–01–2025 ರ ಅಂತ್ಯಕ್ಕೆ ಇರುವ ಮೊಬಲಗಿನ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ.	ಬ್ಯಾಂಕ್ ಖಾತೆಗಳ ವಿವರ	ಮೊಬಲಗು	ಷರಾ
1.	(Fund I) ಉಳಿತಾಯ ಶುಲ್ಕದ ಖಾತೆ ಸಂಖ್ಯೆ: 64041739956 (ಪರಿಶೀಲನಾ ಶುಲ್ಕ, ಕೆ.ಟಿ.ಸಿ.ಪಿ. ಕಾಯ್ದೆ 18ರ ಅಡಿಯಲ್ಲಿ ಉತ್ತಮತೆ ಶುಲ್ಕ, ಕಟ್ಟಡ ಶುಲ್ಕ ಹಾಗೂ ಇತರೆ ಶುಲ್ಕ)	ರೂ. 66,16,683=50	ನಿಗಧಿತ ಠೇವಣಿಯ ಮೊಬಲಗು ರೂ. 1695912=00 ಗಳನ್ನು ದಿನಾಂಕ: 15–01–2025 ರಂದು ಉಳಿತಾಯ ಖಾತೆಗೆ ವರ್ಗಾಯಿಸಲಾಗಿದೆ.
2.	(Fund II) ಕೆರೆ ಅಭಿವೃದ್ಧಿ ಶುಲ್ಕದ ಖಾತೆ ಸಂಖ್ಯೆ: 64113591421	ರೂ. 3,15,14,578=00	ಐದು ನಿಗಧಿತ ಠೇವಣಿಯ ಮೊಬಲಗು:– ರೂ.85,93,268=00, ರೂ.85,93,268=00, ರೂ.27,26,930=00, ರೂ.20,61,005=00 ಮತ್ತು ರೂ.85,93,268=00 ಗಳನ್ನು ದಿನಾಂಕ: 15–01–2025 ರಂದು ಕೆರೆ ಉಳಿತಾಯ ಖಾತೆಗೆ ವರ್ಗಾಯಿಸಲಾಗಿದೆ.

3.	(Fund III) ಪಾರ್ಕ್ ವಿನಾಯಿತಿ ಶುಲ್ಕದ **ನಿಗಧಿತ ಠೇವಣಿ**	ರೂ. 55,67,538=00	ನಿಗಧಿತ ಠೇವಣಿಯನ್ನು ದಿನಾಂಕ: 21–12–20245 ರಿಂದ 21–12–2025 ರ ಒಂದು ವರ್ಷದ ಅವಧಿಗೆ ನವೀಕರಿಸಲಾಗಿದೆ.
4.	(Fund IV) ಸೆಸ್ ಶುಲ್ಕದ ಖಾತೆ ಸಂಖ್ಯೆ: 40179698207 (ನೀರು ಸರಬರಾಜು ಸೆಸ್, ಸ್ಲಂ ಸೆಸ್, ವರ್ತುಲ ರಸ್ತೆ,)	ರೂ. 2586787=00	ನಿಗಧಿತ ಠೇವಣಿಯ ಮೊಬಲಗು ರೂ. 15,54,588=00 ಗಳನ್ನು ದಿನಾಂಕ: 15–01–2025ರಂದು ಸೆಸ್ ಖಾತೆಗೆ ವರ್ಗಾಯಿಸಲಾಗಿದೆ. ಸರ್ಕಾರದ ಪತ್ರ ಸಂಖ್ಯೆ: ನಅಇ 19 ಟಿಟಿಪಿ 2024(ಇ) ದಿನಾಂಕ:29–10–2024 ರನ್ವಯ 2021–22, 2022–23 ಮತ್ತು 2023–24 ನೇ ಸಾಲಿನಲ್ಲಿ ವಸೂಲಿಸಿರುವ ಕೊಳಚೆ ಅಭಿವೃದ್ಧಿ ಶುಲ್ಕದ ಶೇ.95 ರಷ್ಟು ಮೊತ್ತ ರೂ.2,41,029=00 ಗಳನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ದಿನಾಂಕ: 31–01–2025 ರಂದು ವರ್ಗಾಯಿಸಲಾಗಿದೆ
4.	(Fund V) ಸಿ.ಎ. ನಿವೇಶನದ ಖಾತೆ ಸಂಖ್ಯೆ: 43198527611	ರೂ.24,65,336=00	–

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಆರ್ಥಿಕ ಇಲಾಖೆಯು ಹೊರಡಿಸಿರುವ ಸುತ್ತೋಲೆ ದಿನಾಂಕ:02–07–2022 ರನ್ವಯ ಕ್ರಮವಹಿಸಬೇಕಾಗಿದ್ದು, ಪ್ರಾಧಿಕಾರದ ಉಳಿತಾಯ ಖಾತೆ (Fund I) ರಲ್ಲಿ ರೂ.66,16,683/– ಗಳಿದ್ದು, ಕುಶಾಲನಗರ ಯೋಜನಾ ಪ್ರಾಧಿಕಾರದ ವೆಚ್ಚಗಳನ್ನು ಉಳಿತಾಯ ಖಾತೆಯಿಂದ ಭರಿಸಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಪ್ರಾಧಿಕಾರದ ಸರಾಸರಿ ಖರ್ಚು 28.5 ಲಕ್ಷಗಳಾಗಿದ್ದು, ಅದನ್ನು ಪರಿಗಣಿಸಿದ್ದಲ್ಲಿ ಉಳಿಕೆ ಮೊತ್ತ 37.6 ಲಕ್ಷಗಳಾಗಿರುತ್ತದೆ. ಸುತ್ತೋಲೆಯಲ್ಲಿ ತಿಳಿಸಿರುವಂತೆ Surplus Fund 25 ಲಕ್ಷ ಮೀರಿದ್ದಲ್ಲಿ ನಿಗಧಿತ ಠೇವಣಿ ಇಡಲು ಕನಿಷ್ಟ 25 ಲಕ್ಷ ಇರಬೇಕೆಂದು ತಿಳಿಸಲಾಗಿದೆ. ಆದ್ದರಿಂದ ಉಳಿತಾಯ ಖಾತೆ (Fund I) ರ 37.6 ಲಕ್ಷ Surplus ಮೊತ್ತವನ್ನು ನಿಗಧಿತ ಠೇವಣಿ ಇಡುವುದು ಸೂಕ್ತವಾಗಿರುತ್ತದೆ.

ಕೆರೆಅಭಿವೃದ್ಧಿ ಶುಲ್ಕ (Fund II) ಖಾತೆಯ ನಿಗಧಿತ ಠೇವಣಿಗಳನ್ನು ಕೆರೆಉಳಿತಾಯ ಖಾತೆಗೆ ವರ್ಗಾಯಿಸಲಾಗಿದ್ದು, ದಿನಾಂಕ:31–01–2025 ರ ಅಂತ್ಯಕ್ಕೆ ರೂ.3,15,14,578=00 ಗಳಿರುತ್ತದೆ. ತಾವರೆಕೆರೆ ಅಭಿವೃದ್ಧಿಗಾಗಿ ಕೆರೆ ಸಂರಕ್ಷಣಾ ಪ್ರಾಧಿಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದ್ದು, 2025–26ನೇ ಸಾಲಿನ ಆಯವ್ಯಯದಲ್ಲಿ ಒಟ್ಟು ರೂ. 2,94,00,000=00 ಗಳನ್ನು ತಾವರೆಕೆರೆ ಅಭಿವೃದ್ಧಿಗೆ ಕಾಯ್ದಿರಿಸಲಾಗಿರುವುದರಿಂದ ನಿಗಧಿತ ಠೇವಣಿ ಇಡುವ ಅವಶ್ಯಕತೆ ಇರುವುದಿಲ್ಲ.

ಈ ಹಿಂದೆ ಪ್ರಾಧಿಕಾರದಲ್ಲಿ ಪಾವತಿಸಿಕೊಳ್ಳಲಾಗಿದ್ದ ಪಾರ್ಕ್ ವಿನಾಯಿತಿ ಶುಲ್ಕವನ್ನು (Fund III) ನಿಗಧಿತ ಠೇವಣಿಯಲ್ಲಿ ಹೂಡಿಕೆ ಮಾಡಲಾಗಿದ್ದು, ಪ್ರತಿ ವರ್ಷ ನವೀಕರಿಸಲಾಗುತ್ತಿದೆ.

ಸೆಸ್ ಶುಲ್ಕದ ಖಾತೆ (Fund IV) ಯಲ್ಲಿ ನೀರು ಸರಬರಾಜು ಸೆಸ್, ರಿಂಗ್‌ರೋಡ್ ಸರ್‌ಚಾರ್ಜ್, ಕೊಳಚೆ ಅಭಿವೃದ್ಧಿ ಶುಲ್ಕಗಳನ್ನು ಪಾವತಿಸಿಕೊಳ್ಳಲಾಗುತ್ತಿದ್ದು, ಸರ್ಕಾರದ ಪತ್ರ ಸಂಖ್ಯೆ: ನಅಇ 19 ಟಿಟಿಪಿ 2024(ಇ) ದಿನಾಂಕ:29–10–2024 ರನ್ವಯ ಕೊಳಚೆ ಅಭಿವೃದ್ಧಿ ಶುಲ್ಕದ ಶೇ.95 ರಷ್ಟು ಮೊತ್ತವನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಪಾವತಿಸಬೇಕಾಗಿರುವುದರಿಂದ, ಸದರಿ ಖಾತೆಯ ನಿಗಧಿತ ಠೇವಣಿಯನ್ನು ಮುಕ್ತಾಯಗೊಳಿಸಿ, 2021–22, 2022–23 ಮತ್ತು 2023–24 ನೇ ಸಾಲಿನಲ್ಲಿ ವಸೂಲಿಸಿರುವ ಕೊಳಚೆ ಅಭಿವೃದ್ಧಿ ಶುಲ್ಕದ ಶೇ.95% ರಷ್ಟು ಮೊತ್ತ ರೂ.2,41,029=00 ಗಳನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ

ಮಂಡಳಿಗೆ ದಿನಾಂಕ:31–01–2025 ರಂದು ವರ್ಗಾಯಿಸಲಾಗಿದೆ. ಮೂರು ಸೆಸ್ ಶುಲ್ಕಗಳನ್ನು ಪ್ರತ್ಯೇಕ ಖಾತೆಗೆ ಪಾವತಿಸಿಕೊಳ್ಳಬೇಕಾಗಿರುವುದರಿಂದ ಏಪ್ರಿಲ್ 2025 ರಿಂದ ಮೂರು ಪ್ರತ್ಯೇಕ ಸೆಸ್ ಖಾತೆಗಳನ್ನು ತೆರೆಯಬೇಕಾಗಿದೆ. 2024–25ನೇ ಸಾಲು ಮುಕ್ತಾಯಗೊಂಡ ನಂತರ ಸದರಿ ಸಾಲಿನ ಶೇ.95% ರಷ್ಟು ಮೊತ್ತವನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಪಾವತಿಸಬೇಕಾಗಿರುವುದರಿಂದ ನಿಗಧಿತ ಠೇವಣಿ ಇಡುವುದು ಸೂಕ್ತವಾಗಿರುವುದಿಲ್ಲ.

ಸಿ.ಎ. ನಿವೇಶನದ ಖಾತೆ (Fund V) ರಲ್ಲಿ ರೂ.24,65,336=00 ಗಳಿದ್ದು, ಸದರಿ ಖಾತೆಯು ಅಭಿವೃದ್ಧಿ ನಿಧಿಯಾಗಿದ್ದು, ಅಭಿವೃದ್ಧಿ ಕಾರ್ಯಗಳಿಗೆ ಬಳಸಬೇಕಾದ ಕಾರಣ ನಿಗಧಿತ ಠೇವಣಿ ಇಡುವುದು ಸೂಕ್ತವಾಗಿರುವುದಿಲ್ಲ.

ಪ್ರಾಧಿಕಾರದಲ್ಲಿ ಒಟ್ಟು ಎಂಟು ನಿಗಧಿತ ಠೇವಣಿಯನ್ನು ದಿನಾಂಕ:21–12–2023 ರಿಂದ 21–12–2024ರ ವರೆಗೆ ಹೂಡಿಕೆ ಮಾಡಲಾಗಿತ್ತು. ಬ್ಯಾಂಕಿನಲ್ಲಿ ಹೂಡಿರುವ ನಿಗಧಿತ ಠೇವಣಿಗೆ 6% ಬಡ್ಡಿ ನೀಡುತ್ತಿದ್ದು, ಮಿತಿಗಿಂತ ಬಡ್ಡಿ ಹೆಚ್ಚಾದಲ್ಲಿ ಬ್ಯಾಂಕಿನಲ್ಲಿ ತೆರಿಗೆಯನ್ನು ಕಟಾಯಿಸುತ್ತಾರೆ. ಅದರಿಂದ ವಿನಾಯಿತಿ ಹೊಂದಲು ಆರ್ಥಿಕ ಇಲಾಖೆಯ ಸುತ್ತೋಲೆಯನ್ವಯ ಕ್ರಮವಹಿಸಬೇಕಾಗಿರುತ್ತದೆ. ಆದ್ದರಿಂದ ಸದರಿ ನಿಗಧಿತ ಠೇವಣಿಗಳನ್ನು ಅವಧಿ ಮುಕ್ತಾಯಗೊಂಡ ನಂತರ ಮೇಲಿನ ಪಟ್ಟಿಯಲ್ಲಿ ವಿವರಿಸಿರುವಂತೆ ಆಯಾ ಖಾತೆಗಳ ಉಳಿತಾಯ ಖಾತೆಗೆ ಹಣ ವರ್ಗಾವಣೆ ಮಾಡಲಾಗಿದೆ.

ಆದ್ದರಿಂದ ಆರ್ಥಿಕ ಇಲಾಖೆಯ ಸುತ್ತೋಲೆ ದಿನಾಂಕ:02–07–2022 ರನ್ವಯ ಕ್ರಮವಹಿಸಲು ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ: ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸುತ್ತೋಲೆಯನ್ವಯ Fund I ರಲ್ಲಿ Surplus Fund ಅಂದಾಜು 37.6 ಲಕ್ಷವಿದ್ದು, ಸದರಿ ಮೊತ್ತವನ್ನು ನಿಗಧಿತ ಠೇವಣಿ ಇಡದೇ ವಿಸ್ತೃತ ಸ್ಥಳೀಯ ಯೋಜನಾ ಪ್ರದೇಶವನ್ನು ಸಿದ್ಧಪಡಿಸಲು ಟೆಂಡರ್ ಪ್ರಕ್ರಿಯೆಗೆ ಉಪಯೋಗಿಸಿಕೊಳ್ಳಬೇಕೆಂದು ನಿರ್ಣಯಿಸಲಾಯಿತು. Fund II ಖಾತೆಯ ಮೊಬಲಗನ್ನು ತಾವರೆಕೆರೆ ಅಭಿವೃದ್ಧಿಗೆ ಕಾಯ್ದಿರಿಸಲಾಗಿರುವುದರಿಂದ ನಿಗಧಿತ ಠೇವಣಿ ಇಡುವ ಅವಶ್ಯಕತೆ ಇರುವುದಿಲ್ಲವೆಂದು ನಿರ್ಣಯಿಸಲಾಯಿತು. Fund IV ರಲ್ಲಿರುವ ಮೊಬಲಗನ್ನು 2024–25ನೇ ಸಾಲಿನ ಶೇ.95% ರಷ್ಟು ಮೊತ್ತವನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಪಾವತಿಸಬೇಕಾಗಿರುವುದರಿಂದ ನಿಗಧಿತ ಠೇವಣಿ ಇಡುವುದು ಸೂಕ್ತವಾಗಿರುವುದಿಲ್ಲ ಎಂದು ನಿರ್ಣಯಿಸಲಾಯಿತು. Fund V ಖಾತೆಯು ಅಭಿವೃದ್ಧಿ ನಿಧಿಯಾಗಿದ್ದು, ಅಭಿವೃದ್ಧಿ ಕಾರ್ಯಗಳಿಗೆ ಬಳಸಬೇಕಾದ ಕಾರಣ ನಿಗಧಿತ ಠೇವಣಿ ಇಡುವ ಅಗತ್ಯ ಇರುವುದಿಲ್ಲ ಎಂದು ನಿರ್ಣಯಿಸಲಾಯಿತು ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 23 ಮೈಅಪ್ರಾ ಟಿಟಿಪಿ 2020(ಇ) ಬೆಂಗಳೂರು, ದಿನಾಂಕ: 21–06–2021 ರನ್ವಯ ನೀರು ಸರಬರಾಜು ಸೆಸ್, ರಿಂಗ್‌ರೋಡ್ ಸರ್‌ಚಾರ್ಜ್, ಕೊಳಚೆ ಅಭಿವೃದ್ಧಿ ಶುಲ್ಕಗಳನ್ನು ಪ್ರತ್ಯೇಕ ಖಾತೆಯಲ್ಲಿ ಪಾವತಿಸಿಕೊಳ್ಳಬೇಕಾಗಿರುವುದರಿಂದ ಎರಡು ಪ್ರತ್ಯೇಕ ಖಾತೆಗಳನ್ನು ಹೊಸದಾಗಿ ತೆರೆದು ಸದರಿ ಮೂರು ಸೆಸ್ ಶುಲ್ಕಗಳನ್ನು ಪ್ರತ್ಯೇಕ ಖಾತೆಯಲ್ಲಿ ಪಾವತಿಸಿಕೊಳ್ಳುವಂತೆ ಸಭೆಯಲ್ಲಿ ಸದಸ್ಯಕಾರ್ಯದರ್ಶಿಗಳಿಗೆ ಸೂಚಿಸಿ ನಿರ್ಣಯಿಸಲಾಯಿತು.

ವಿಷಯಸಂಖ್ಯೆ(05)**:** ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ಹೆಚ್ಚುವರಿ ವಿಷಯಗಳು:

(ಅ):– ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯನ್ನು ವಿಸ್ತರಿಸುವ ಬಗ್ಗೆ.

ಚರ್ಚೆ: ಅಧ್ಯಕ್ಷರು ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯನ್ನು ವಿಸ್ತರಿಸುವ ಪ್ರಸ್ತಾವನೆಯ ಬಗ್ಗೆ ಮಾಹಿತಿ ಕೇಳಿದರು.

ನಿರ್ಣಯ: ಸದಸ್ಯಕಾರ್ಯದರ್ಶಿಗಳು ಮಾತನಾಡಿ ಹಿಂದಿನ ಸಭೆಗಳ ನಿರ್ಣಯದಂತೆ ಈಗಾಗಲೇ ನಕ್ಷೆಯನ್ನು ಸಿದ್ಧಪಡಿಸಲಾಗುತ್ತಿದ್ದು, ಎಲ್ಲೆ ವಿಸ್ತರಿಸುವ ಬಗ್ಗೆ ಶೀಘ್ರವಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ಅದರಂತೆ ಕ್ರಮವಹಿಸಬೇಕೆಂದು ಸದಸ್ಯಕಾರ್ಯದರ್ಶಿಗಳಿಗೆ ತಿಳಿಸಿ ನಿರ್ಣಯಿಸಲಾಯಿತು.

(ಆ):– ಹೊರಗುತ್ತಿಗೆ ನೌಕರರ ಅವಧಿಯು ಮುಗಿಯುತ್ತಿದ್ದು, ಮುಂದುವರೆಸುವ ಬಗ್ಗೆ.

ಟಿಪ್ಪಣಿ:– ಕುಶಾಲನಗರ ಯೋಜನಾ ಪ್ರಾಧಿಕಾರದ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಖಾಸಗಿ ಸಂಸ್ಥೆಯಿಂದ ದರಪಟ್ಟಿಯ ಮೂಲಕ ಕಂಪ್ಯೂಟರ್ ಆಪರೇಟರ್ ಮತ್ತು 'ಡಿ' ದರ್ಜೆ ಸಿಬ್ಬಂದಿ ಇಬ್ಬರು ನೌಕರರನ್ನು ಪಡೆಯಲಾಗಿದ್ದು, ಸದರಿ ನೌಕರರ ಅವಧಿಯು 31–03–2025 ರಂದು ಮುಕ್ತಾಯಗೊಳ್ಳುತ್ತದೆ. ದಿನಾಂಕ:01–04–2025 ರಿಂದ ಹೊಸದಾಗಿ ಟೆಂಡರ್ ಕರೆದು ಹೊರಗುತ್ತಿಗೆಯಲ್ಲಿ ಸಿಬ್ಬಂದಿಗಳನ್ನು ಪಡೆಯಬೇಕಾಗಿರುತ್ತದೆ. ಆದರೆ, ಪ್ರಾಧಿಕಾರಕ್ಕೆ ಸರ್ಕಾರವು ಸದಸ್ಯಕಾರ್ಯದರ್ಶಿ ಹುದ್ದೆಯನ್ನು ಮಾತ್ರ ಸೃಜಿಸಿದ್ದು, ಇನ್ನಿತರ ಯಾವುದೇ ಹುದ್ದೆಯನ್ನು ಸೃಜಿಸಿರುವುದಿಲ್ಲವಾದ್ದರಿಂದ ಸರ್ಕಾರದಿಂದ ಹುದ್ದೆ ಮಂಜೂರಾಗದೇ ಟೆಂಡರ್ ಪ್ರಕ್ರಿಯೆಯನ್ನು ಮಾಡುವುದು ಸರಿಯಾದ ಕ್ರಮವಾಗಿರುವುದಿಲ್ಲ. 2021–22ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ 2022ರ ಸಪ್ಟೆಂಬರ್ ಮಾಹೆಯವರೆಗೆ ಟೆಂಡರ್ ಪ್ರಕ್ರಿಯೆ ಕೈಗೊಳ್ಳದೇ ಹೊರಗುತ್ತಿಗೆ ಆಧಾರದ ಮೇಲೆ ನೌಕರರ ಸೇವೆ ಪಡೆದು ವೇತನ ಪಾವತಿ ಮಾಡಿರುವ ಮೊತ್ತ ರೂ. 411600/– ಗಳನ್ನು ಮತ್ತು 2022–23ನೇ ಸಾಲಿನಲ್ಲಿ ರೂ. 261100/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ದಿನಾಂಕ:20–07–2024 ರಂದು ನಡೆದ ಪ್ರಾಧಿಕಾರದ 61ನೇ ಸಾಮಾನ್ಯ ಸಭೆಯಲ್ಲಿ ಪ್ರಾಧಿಕಾರದ ದೈನಂದಿನ ಕೆಲಸ ಕಾರ್ಯಗಳಿಗೆ ಒಬ್ಬರು ಕಛೇರಿ ಸಹಾಯಕರು, ಒಬ್ಬರು ಟೈಪಿಸ್ಟ್ ಮತ್ತು ಒಬ್ಬರು 'ಡಿ' ದರ್ಜೆ ನೌಕರ ಒಟ್ಟು ಮೂರು ಜನ ಸಿಬ್ಬಂದಿಗಳನ್ನು ಹೊರಗುತ್ತಿಗೆಯಲ್ಲಿ ಪಡೆಯಲು ಸರ್ಕಾರದಿಂದ ತಾತ್ಕಾಲಿಕ ಮಂಜೂರಾತಿಯನ್ನು ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ನಿರ್ಣಯಿಸಲಾಗಿದ್ದು, ಅದರಂತೆ ದಿನಾಂಕ: 03–08–2024 ರಂದು ಮಾನ್ಯ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ, ಬೆಂಗಳೂರು ಇವರಿಗೆ ಮೂರು ಜನ ಸಿಬ್ಬಂದಿಗಳನ್ನು ಹೊರಗುತ್ತಿಗೆಯಲ್ಲಿ ಪಡೆಯಲು ಸರ್ಕಾರದಿಂದ ತಾತ್ಕಾಲಿಕ ಮಂಜೂರಾತಿಯನ್ನು ಪಡೆಯಲು ಸರ್ಕಾರಕ್ಕೆ ತಮ್ಮ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಕೋರಲಾಗಿದೆ.

ಮಾನ್ಯ ಆಯುಕ್ತರು, ಆಡಳಿತಾತ್ಮಕ ಹಿತದೃಷ್ಟಿಯಿಂದ ಕನಿಷ್ಟ ಎರಡು ಹುದ್ದೆ (ದತ್ತಾಂಶ ನಮೂದು ಸಹಾಯಕರು/ಕಛೇರಿ ಸಹಾಯಕರು–01 ಹುದ್ದೆ ಮತ್ತು ಗ್ರೂಪ್–'ಡಿ'–01 ಹುದ್ದೆ) ಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಹಾಗೂ ಸದರಿ ಹುದ್ದೆಗಳಿಗೆ ತಗಲುವ ವೆಚ್ಚವನ್ನು ಪ್ರಾಧಿಕಾರದ ನಿಧಿಯಿಂದಲೇ ಭರಿಸುವ ಷರತ್ತಿಗೊಳಪಟ್ಟು ಸರ್ಕಾರದ ಮಂಜೂರಾತಿಯನ್ನು ನೀಡಬಹುದಾಗಿದೆ ಎಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ದಿನಾಂಕ:03–08–2024 ರಂದು ಮಾನ್ಯ ಆಯುಕ್ತರು ಆಡಳಿತಾತ್ಮಕ ಹಿತದೃಷ್ಟಿಯಿಂದ ಕನಿಷ್ಟ ಎರಡು ಹುದ್ದೆ (ದತ್ತಾಂಶ ನಮೂದು ಸಹಾಯಕರು/ಕಛೇರಿ ಸಹಾಯಕರು–01 ಹುದ್ದೆ ಮತ್ತು ಗ್ರೂಪ್–'ಡಿ'–01 ಹುದ್ದೆ) ಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಮಂಜೂರಾತಿ ನೀಡಬಹುದೆಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು,

ಸರ್ಕಾರದಿಂದ ಇನ್ನೂ ಮಂಜೂರಾತಿ ದೊರೆತಿರುವುದಿಲ್ಲ. ದಿ:01–04–2025 ರಿಂದ ಇಬ್ಬರು ನೌಕರರನ್ನು ಹೊರಗುತ್ತಿಗೆ ಸೇವೆಯಲ್ಲಿ ಪಡೆಯಲು ಕಾರ್ಮಿಕ ಇಲಾಖೆಯು ನಿಗಧಿಪಡಿಸಿರುವ ಕನಿಷ್ಟ ವೇತನವನ್ನು ಪಾವತಿಸಬೇಕಾಗಿದ್ದು, ಅದರಂತೆ ಎರಡು ಹುದ್ದೆಗಳಿಗೆ ಒಂದು ವರ್ಷಕ್ಕೆ ರೂ. 5 ಲಕ್ಷ ಮೀರುವುದರಿಂದ ಹುದ್ದೆ ಮಂಜೂರು ಆಗದೇ ಇದ್ದಾಗ ಕೆಟಿಪಿಪಿ ಕಾಯ್ದೆಯನ್ವಯ ಇ.ಟೆಂಡರ್ ಮೂಲಕ ಹೊರಗುತ್ತಿಗೆ ಸೇವೆ ಪಡೆಯುವುದು ಸಾಧ್ಯವಿರುವುದಿಲ್ಲ.

ಆದ್ದರಿಂದ ಸರ್ಕಾರದಿಂದ ತಾತ್ಕಾಲಿಕ ಮಂಜೂರಾತಿ ದೊರೆಯುವ ದಿನಾಂಕದವರೆಗೆ ಇಬ್ಬರು ನೌಕರರನ್ನು ಈಗಿರುವ ಹಾಲಿ ಸಂಸ್ಥೆಯಿಂದಲೇ ಕಾರ್ಮಿಕ ಇಲಾಖೆಯು ನಿಗಧಿಪಡಿಸಿರುವ ಕನಿಷ್ಟ ವೇತನಕ್ಕೆ ಮುಂದುವರೆಸುವುದು ಸೂಕ್ತವಾಗಿರುತ್ತದೆ.

ನಿರ್ಣಯ: ಸಭೆಯಲ್ಲಿ ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಮಾನ್ಯ ಆಯುಕ್ತರು, ಆಡಳಿತಾತ್ಮಕ ಹಿತದೃಷ್ಟಿಯಿಂದ ಕನಿಷ್ಟ ಎರಡು ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಹಾಗೂ ಸದರಿ ಹುದ್ದೆಗಳಿಗೆ ತಗಲುವ ವೆಚ್ಚವನ್ನು ಪ್ರಾಧಿಕಾರದ ನಿಧಿಯಿಂದಲೇ ಭರಿಸುವ ಷರತ್ತಿಗೊಳಪಟ್ಟು ಸರ್ಕಾರದ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುವುದರಿಂದ, ಸರ್ಕಾರದಿಂದ ತಾತ್ಕಾಲಿಕ ಮಂಜೂರಾತಿ ದೊರೆಯುವ ದಿನಾಂಕದವರೆಗೆ ಇಬ್ಬರು ನೌಕರರನ್ನು ಈಗಿರುವ ಹಾಲಿ ಸಂಸ್ಥೆಯಿಂದಲೇ ಕಾರ್ಮಿಕ ಇಲಾಖೆಯು ನಿಗಧಿಪಡಿಸಿರುವ ಕನಿಷ್ಟ ವೇತನಕ್ಕೆ ಮುಂದುವರೆಸಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು

ಸಹಿ/–	ಸಹಿ/–
ಸದಸ್ಯ ಕಾರ್ಯದರ್ಶಿ	ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ	ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ	ಕುಶಾಲನಗರ